ಅ) ಹುಲಿಗಳು ಜಾನುವಾರುಗಳನ್ನು ಕೊಂದರೆ ಸರ್ಕಾರದ ಪರಿಹಾರ ಕೊಡಬೇಕಾಗಿದ್ದರೂ ಜಾನುವಾರುಗಳ ಬೆಳೆಗಳ ಮೌಲ್ಯದ ಒಂದು ಭಾಗ ಕೇವಲ ರೂ. ೩೦೦-೦೦ನ್ನು ಮಾತ್ರ ಕೊಡುತ್ತಿದ್ದು ಬೆಳೆಗೆ ಯಾವ ಪರಿಹಾರವನ್ನು ಕೊಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಈ ವನ್ಯ ಪ್ರಾಣಿಗಳಿಂದ ನಾಶವಾಗುತ್ತಿರುವ ಜಾನುವಾರು ಮತ್ತು ಫಸಲು ರಕ್ಷಣೆಗಾಗಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಜಿ.ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ವನ್ಯ ಪ್ರಾಣಿಗಳಿಂದ ಬೆಳೆ ಹಾನಿ ಹಾಗೂ ಜಾನುವಾರುಗಳ ಪ್ರಾಣ ಹಾನಿಯಾಗಿದ್ದಲ್ಲಿ ಅಂತಹವರಿಗೆ ಪಂಚಾಯಿತಿದಾರರು ಈ ಬಗ್ಗೆ ಬರೆದ ಮಹಜರುಗಳಲ್ಲಿ ನಮೂದಿಸಿರುವ ಅಂದಾಜು ಪರಿಹಾರ ಹಾಗೂ ಈ ಬಗ್ಗೆ ಸಂಬಂಧಪಟ್ಟ ಅರಣ್ಯಾಧಿಕಾರಿಗಳ ಶಿಫಾರಸ್ಸಿನ ಆಧಾರದ ಮೇಲೆ ಪರಿಹಾರ ನೀಡಲಾಗಿದೆ.

ಇ) ವನ್ಯ ಪ್ರಾಣಿಗಳ ಹಾವಳಿ ಹೆಚ್ಚಾಗಿದ್ದ ಕಡೆಗಳಲ್ಲಿ ವನ್ಯ ಪ್ರಾಣಿಗಳನ್ನು ಕಾಡಿನೊಳಗೆ ಓಡಿಸಲಾಗುತ್ತಿದೆ.

ಮಾಲೂರು ತಾಲ್ಲೂಕು ಚಿಕ್ಕಕುಂತೂರಿನಲ್ಲಿ ಗ್ರಾಮಾಂತರ ಪಶುವೈದ್ಯಶಾಲೆ ಮಂಜೂರಾತಿ

೧೩೦೩ (೨೭೪೯) ಶ್ರೀ ಹೆಚ್.ಬಿ. ದ್ಯಾವೀರಪ್ಪ, (ಮಾಲೂರು).—ಮಾನ್ಯ ಪಶು ಹಾಗೂ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ವಕ್ಫ್ ಮಂತ್ರಿಗಳು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;—

ಅ) ಮಾಲೂರು ತಾಲ್ಲೂಕು ಚಿಕ್ಕಕುಂತೂರು ಗ್ರಾಮದಲ್ಲಿ ಗ್ರಾಮಾಂತರ ಪಶುವೈದ್ಯ ಶಾಲೆ ೧೯೭೯ರಲ್ಲಿ ಮಂಜೂರಾಗಿದ್ದು, ಅಲ್ಲಿನ ಜನತೆ ಅನೇಕ ಸಾರಿ ಮನವಿ ಸಲ್ಲಿಸಿದ್ದಾಗ್ಯೂ ಪಶುವೈದ್ಯ ಶಾಲೆ ಪ್ರಾರಂಭವಾಗದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಪಶುವೈದ್ಯ ಶಾಲೆ ಪ್ರಾರಂಭಿಸಲು ಸರ್ಕಾರದವರು ಸೂಕ್ತ ಕ್ರಮಕೈಗೊಳ್ಳುವರೆ ?

ಶ್ರೀ ಮಹಮ್ಮದ್ ಮೊಯಿನುದ್ದೀನ್ (ಪಶು ಹಾಗೂ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ವಕ್ಫ್ ಸಚಿವರು).—

ಅ) ಬಂದಿದೆ.

ಆ) ಈ ಬಗ್ಗೆ ಕೋಲಾರ ಜಿಲ್ಲಾ ಪರಿಷತ್‌ನವರೇ ಸೂಕ್ತ ಕ್ರಮಕೈಗೊಳ್ಳಬೇಕಾಗಿರುತ್ತದೆ.

ಚೆಮಕಾ ನೂಲು- ಹತ್ತಿ ನೂಲು ಹಾಗೂ ರೇಷ್ಮೆ ದರಗಳಂ ಹೆಚ್ಚಿರುವುದರ ಬಗ್ಗೆ

೧೩೦೪ (೨೭೭೪) ಶ್ರೀ ಶಿವಸಂಗಪ್ಪ ಶಿದ್ದಪ್ಪ ಕಡಪಟ್ಟಿ (ಹುನಗುಂದ).—ಮಾನ್ಯ ಬಂದರು, ವಿಮಾನಯಾನ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಚಮಕಾ ನೂಲು, ಹತ್ತಿನೂಲು ರೇಷ್ಮೆ ದರಗಳು ಹೆಚ್ಚಿರುವುದರಿಂದ ನೇಕಾರರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಅ) ನೇಕಾರರು ಉಪಯೋಗಿಸುವ ಪಕ್ಕಾ ನೂಲು ಮಾರದೆ ಕಚ್ಚಾ ನೂಲಿನ ಬೆಲೆ ಹೆಚ್ಚಾಗಿ ಬಡನೇಕಾರರ ಪರಿಸ್ಥಿತಿ ಸುಧಾರಿಸಲು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಕೈಗೊಂಡ ನಿರ್ದಿಷ್ಟ ಕ್ರಮಗಳಾವುವು ?

ಇ) ಹಿಂದೆ ಸರ್ಕಾರ ಕೈಮಗ್ಗಗಳ ಬಗ್ಗೆ ಪ್ರತ್ಯೇಕ ಡೈರೆಕ್ಟರೇಟ್ ಆಶ್ವಾಸನೆ ನೀಡಿರುವುದು ನಿಜವೇ ?

ಶ್ರೀ ಎಂ. ರಘುಪತಿ (ಬಂದರು, ವಿಾನುಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) .—

ಅ) ಬಂದಿದೆ.

ಆ) ಪಕ್ಕಾ ನೂಲನ್ನು ಮಾರಾಟ ಮಾಡಲು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ (೫೦:೫೦) ರಿಬೇಟು ಅವಧಿ ಅಲ್ಲದೇ ರಾಜ್ಯ ಸರ್ಕಾರವೇ ಪಕ್ಕಾ ಮಾಲನ್ನು ಮಾರಾಟ ಮಾಡುವ ಸಲುವಾಗಿ ವಿಶೇಷ ರಿಬೇಟನ್ನು ಬೇರೆ ಬೇರೆ ಅವಧಿಯಲ್ಲಿ ಕೊಡಲಾಗಿದೆ. ಅಲ್ಲದೆ ಸಹಾಯ ಧನವನ್ನು ಸಹ ಜನತಾ ಬಟ್ಟೆಗೆ ಕೊಡಲಾಗಿದೆ.

ಇ) ನಿಜ.

ಕಿರು ಜಲ ವಿದ್ಯುತ್ ಯೋಜನೆ

೧೩೦೭ (೨೭೪೩) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಪವಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ವಿದ್ಯುತ್ ನಿಗಮವು ಕಿರು ವಿದ್ಯುತ್ ಯೋಜನೆ ಸ್ಥಾಪಿಸಲು ಸೂಕ್ತ ಸ್ಥಳಗಳನ್ನು ಗುರುತಿಸುವುದು ನಿಜವೇ. ಹಾಗಿದ್ದಲ್ಲಿ ಅವುಗಳ ಹೆಸರುಗಳು?

ಆ) ಕರ್ನಾಟಕ ಪವರ್ ಕಾರ್ಪೋರೇಷನ್ ಈವರೆಗೆ ಕೈಗೊಂಡಿರುವ ಯೋಜನೆಗಳ ಹೆಸರುಗಳು?

ಇ) ಖಾಸಗಿ ಉದ್ಯಮಿಗಳಿಗೆ ಮಂಜೂರಾಗಿರುವ ಕರು ಜಲ ವಿದ್ಯುತ್ ಯೋಜನೆಗಳ ಹೆಸರುಗಳು ?

ಈ) ಈ ಕಿರು ಜಲವಿದ್ಯುತ್ ಯೋಜನೆಗಳು ಕಾರ್ಯಗತಗೊಂಡನಂತರ ಇವುಗಳಿಂದ ಉತ್ಪಾದಿಸ ಬಹುದಾದ ಒಟ್ಟು ವಿದ್ಯುತ್ ಶಕ್ತಿ ಎಷ್ಟು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ಹೌದು. ವಿದ್ಯುತ್ ಉತ್ಪಾದನೆಗೆ ಅನುಕೂಲವಾಗುವಂತೆ ಕಂಡು ಬಂದ ೨೨೫ ಪ್ರದೇಶಗಳನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಗುರುತಿಸಿದೆ. ಇವುಗಳಲ್ಲಿ ೨೫ ಯೋಜನೆಗಳನ್ನು ನಿಗಮದ ತೀವ್ರ ಪರಿಶೀಲನೆ ಕಾರ್ಯರೂಪದಲ್ಲಿದೆ. ೨೫ ಯೋಜನೆಗಳ ವಿವರಗಳನ್ನು ಅನುಬಂಧ I ರಲ್ಲಿ ಕೊಡಲಾಗಿದೆ.

ಆ) ಮಲ್ಲಾಪುರ ಜಲವಿದ್ಯುತ್ ಯೋಜನೆ, ಸಿರವಾರ, ಗಣೇಕಲ್ ಮತ್ತು ಕಲಮಲ ಕಿರು ಜಲವಿದ್ಯುತ್ ಯೋಜನೆಗಳನ್ನು ತಾತ್ಕಾಲಿಕವಾಗಿ ಎಡದಂಡೆ ನಾಲೆಯಲ್ಲಿ ಕೈಗೊಳ್ಳಲಾಗಿದೆ.

ಇ) ವಿವರಗಳನ್ನು ಅನುಬಂಧ IIರಲ್ಲಿ ಕೊಟ್ಟಿದೆ.

ಈ) ಈಗ ಕೈಗೊಂಡಿರುವ ನಾಲ್ಕು ಯೋಜನೆಗಳ ಒಟ್ಟು ಉತ್ಪಾದನಾ ಸಾಮರ್ಥ್ಯ ೧೦.೭೫ ಮೆಗೆವಾಟ್ ಮತ್ತು ವಾರ್ಷಿಕ ವಿದ್ಯುತ್ ಉತ್ಪಾದನೆ ೬೦.೦೨ ಮಿಲಿಯನ್ ಯೂನಿಟ್‌ಗಳು.